O.S.No.:58/2021

PW.:1

**ದಿಃ 07-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ Sri.ABB ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಸಂಗತಿಗಳು ನನಗೆ ತಿಳಿದಿರುತ್ತವೆ ಹಾಗೂ ನಾನು ಸದರಿ ಪ್ರಮಾಣ ಪತ್ರಕ್ಕೆ ನನ್ನ ಸಹಿಯನ್ನು ಮಾಡಿರುತ್ತೇನೆ.

ಸಾಕ್ಷಿಯು ಈ ದಿನ ಕೆಳಕಂಡ ದಾಖಲೆಗಳನ್ನು ಹಾಜರು ಮಾಡಿದ್ದು ಅವುಗಳನ್ನು ಈ ಕೆಳಕಂಡಂತೆ ನಿಶಾನೆಗೊಳಿಸಲಾಗಿದೆ.

1. 2021 ನೇ ಸಾಲಿನ ಅವರಾದಿ ಗ್ರಾಮ ಪಂಚಾಯಿತಿಯ ಆಸ್ತಿ ನಂ.192/ಸಿ ಉತಾರನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-1 ಎಂದು,
2. ಅವರಾದಿ ಗ್ರಾಮ ಪಂಚಾಯಿತಿಯ ಕಾರ್ಯದರ್ಶಿ ಇವರು ದಿಃ 14-09-2011 ರಂದು ನೀಡಿದ ಪ್ರಮಾಣ ಪತ್ರ ಹಾಜರುಪಡಿಸುತ್ತಿದ್ದೇನೆ. ನಿಪಿ-2 ಎಂದು,
3. 2012 ನೇ ಸಾಲಿನ ಅವರಾದಿ ಗ್ರಾಮ ಪಂಚಾಯಿತಿಯ ಆಸ್ತಿ ನಂ.192/ಸಿ ಉತಾರನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-3 ಎಂದು,
4. ಆಸ್ತಿ ನಂ.192/ಸಿ ಇದರ ಕರಪಾವತಿಯ 3 ರಶೀದಿಗಳನ್ನು ಅವುಗಳನ್ನು ಒಟ್ಟಾಗಿ ನಿಪಿ-4 ಎಂದು,
5. ದಿಃ 19-06-2019 ರಂದು ಭೂಮಾಪನಾ ಇಲಾಖೆಗೆ ದಾವಾ ಆಸ್ತಿಯನ್ನು ಅಳತೆ ಮಾಡಲು ಕೋರಿ ನಾನು ಸಲ್ಲಿಸಿದ ಅರ್ಜಿಗೆ ಸಂಬಂಧಪಟ್ಟಂತೆ ನೀಡಿದ ಶುಲ್ಕದ ರಶೀದಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-5 ಎಂದು,
6. ಅವರಾದಿ ಗ್ರಾಮ ಪಂಚಾಯಿತಿಯವರು ನೀಡಿದ ಸ್ವೀಕೃತಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-6 ಎಂದು,
7. ತಹಶೀಲ್ದಾರ ಗೋಕಾಕ ಕಚೇರಿ ಇವರು ನೀಡಿದ ದಾವಾ ಆಸ್ತಿಯ ನಕಾಶೆಯ ದೃಢೀಕೃತ ನಕಲನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-7 ಎಂದು,
8. ದಾವಾ ಆಸ್ತಿಯ 2 ಭಾವಚಿತ್ರಗಳನ್ನು ಹಾಜರುಪಡಿಸುತ್ತಿದ್ದೇನೆ. ಅವುಗಳನ್ನು ಒಟ್ಟಾಗಿ ನಿಪಿ-8 ಎಂದು,
9. ಭಾವಚಿತ್ರದ ಸಿಡಿಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-8(ಎ) ಎಂದು,
10. 2011-12 ನೇ ಸಾಲಿನ ಅವರಾದಿ ಗ್ರಾಮ ಪಂಚಾಯಿತಿಯ ಆಸ್ತಿ ನಂ.192 ಉತಾರನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-9 ಎಂದು,
11. 2015 ನೇ ಸಾಲಿನ ಅವರಾದಿ ಗ್ರಾಮ ಪಂಚಾಯಿತಿಯ ಆಸ್ತಿ ನಂ.192/ಎ ಉತಾರನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-10 ಎಂದು,

12. ಆಸ್ತಿ ನಂ.192/ಬಿ ಸಾಮಾನ್ಯ ಪಾವತಿ ರಶೀಯನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-11 ಎಂದು,

13. 2011 ನೇ ಸಾಲಿನ ಅವರಾದಿ ಗ್ರಾಮ ಪಂಚಾಯಿತಿಯ ಆಸ್ತಿ ನಂ.192/ಬಿ ಉತಾರನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-12 ಎಂದು,

14. 2012 ನೇ ಸಾಲಿನ ಅವರಾದಿ ಗ್ರಾಮ ಪಂಚಾಯಿತಿಯ ಆಸ್ತಿ ನಂ.192/ಡಿ ಉತಾರನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-13 ಎಂದು,

15. ದಿಃ 19-05-2012 ರಂದು ನೀಡಿದ ಸ್ವತ್ತಿನ ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರುಪಡಿಸುತ್ತಿದ್ದೇನೆ. ಅದನ್ನು ನಿಪಿ-14 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು ಆದರೆ ಪ್ರತಿವಾದಿಯರು ಯಾವುದೇ ಕೈಪಿಯತ ಸಲ್ಲಿಸದೇ ಇರುವುದರಿಂದ ಪಾಟೀ ಸವಾಲು ಮಾಡಲು ಬರುವುದಿಲ್ಲ ಪ್ರತಿವಾದಿ ಪರ ವಕೀಲರ ಪ್ರಾರ್ಥನೆಯನ್ನು ತಿರಸ್ಕರಿಸಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
ಮೂಡಲಗಿ.